# ಕರ್ನಾಟಕ ವಿಧಾನ ಪರಿಷತ್ತು

## 72ರ ನಿಯಮದ ಮೇರೆಗೆ ಗಮನ ಸೆಳೆಯುವ ಸೂಚನೆ

**ಮಾನ್ಯ ವಿಧಾನ ಪರಿಷತ್ ಸದಸ್ಯರುಗಳಾದ ಶ್ರೀ ನಿರಾಣಿ ಹಣಮಂತ ರುದ್ರಪ್ಪ ಇವರು ನಿಯಮ 72ರಡಿ ಸಲ್ಲಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ.**

**ಸೂಚನೆ:** ಬಾಗಲಕೋಟೆ ಮತ್ತು ವಿಜಯಪುರ ಅವಳಿ ಜಿಲ್ಲೆಗಳಲ್ಲಿನ ಪ್ರವಾಸಿ ತಾಣಗಳಾದ ಬಾದಾಮಿ, ಬನಶಂಕರಿ, ಐಹೊಳೆ, ಪಟ್ಟದಕಲ್ಲು, ಗೋಲಗುಂಬಜ, ಶಿವನ ಮಂದಿರ, ಆಲಮಟ್ಟಿ ಜಲಾಶಯದ ಹಿನ್ನೀರಿನಲ್ಲಿ ಬಗೆ ಬಗೆಯ ಪಕ್ಷಿಯ ತಾಣಗಳನ್ನು ನಿರ್ಮಿಸುವುದು ಮತ್ತು ಇತ್ಯಾದಿ ಪ್ರವಾಸಿ ತಾಣಗಳನ್ನು ಪ್ರವಾಸೋದ್ಯಮ ಇಲಾಖೆಯಿಂದ ಅಭಿವೃದ್ಧಿಪಡಿಸುವ ಕುರಿತು ಸರ್ಕಾರದ ಗಮನ ಸೆಳೆಯಬಯಸುತ್ತೇನೆ.

**ಉತ್ತರ:**

ಪ್ರವಾಸೋದ್ಯಮ ನೀತಿ 2020-26 ರನ್ವಯ ರಾಜ್ಯಾದ್ಯಂತ 810 ಪ್ರವಾಸಿ ತಾಣಗಳನ್ನು ಗುರುತಿಸಲಾಗಿದೆ. ಅದರಲ್ಲಿ ಬಾಗಲಕೋಟೆ ಮತ್ತು ವಿಜಯಪುರ ಜಿಲ್ಲೆಯಲ್ಲಿ ಈ ಕೆಳಕಂಡ ಪ್ರವಾಸಿ ಸ್ಥಳಗಳನ್ನು ಪ್ರವಾಸಿ ತಾಣಗಳಾಗಿ ಗುರುತಿಸಲಾಗಿತ್ತು.

| ಜಿಲ್ಲೆ | ತಾಲ್ಲೂಕು | 2020-25 ಪ್ರವಾಸೋದ್ಯಮ ನೀತಿಯನ್ವಯ ಗುರುತಿಸಿರುವ ಪ್ರವಾಸಿ ತಾಣಗಳು | ತಾಣಗಳ ಸಂಖ್ಯೆ | ಜಿಲ್ಲೆ | ತಾಲ್ಲೂಕು | 2020-25 ಪ್ರವಾಸೋದ್ಯಮ ನೀತಿಯನ್ವಯ ಗುರುತಿಸಿರುವ ಪ್ರವಾಸಿ ತಾಣಗಳು | ತಾಣಗಳ ಸಂಖ್ಯೆ |
|---|---|---|---|---|---|---|---|
| ಬಾಗಲಕೋಟೆ | ಬಾಗಲಕೋಟೆ | ಮುಚಕಂಡಿಕೆರೆ, ಸಿಮಿಕೇರಿ-ಲಡ್ಡುಮುತ್ಯಾ | 2 | ವಿಜಯಪುರ | ವಿಜಯಪುರ | ಗೋಲಗುಂಬಜ ಮತ್ತು ಇಬ್ರಾಹಿಂ ರೋಜಾ, ತೊರವಿ, ಕನಮಡಿ, ಜಾಲಗೇರಿ ಮುಮ್ಮಟ್ಟಿ ಗುಡ್ಡ, ದ್ಯಾಬೇರಿ, ಕುಮಟಗಿ, ಉಪ್ಪಲದಿನ್ನಿ, ಹರಳಯ್ಯನ ಗುಂಡ, ಶೇಗುಣಶಿ, ತಿಕೋಟ. | 11 |
| | ಹುನಗುಂದ | ಐಹೊಳೆ, ಕೂಡಲ ಸಂಗಮ | 2 | | ಬಸವನ ಬಾಗೇವಾಡಿ | ಬಸವನ ಬಾಗೇವಾಡಿ, ಆಲಮಟ್ಟಿ ಆಣೆಕಟ್ಟು ಇಂಗಳೇಶ್ವರ | 3 |
| | ಬಾದಾಮಿ | ಬಾದಾಮಿ, ಪಟ್ಟದಕಲ್ಲು, ಮಹಾಕೂಟ | 3 | | ಮುದ್ದೇಬಿಹಾಳ | ಯಲಗೂರು, ತಂಗಡಗಿ, ಕೋಳೂರು. | 3 |
| | ಬೀಳಗಿ | ಚಿಕ್ಕಸಂಗಮ | 1 | | ಇಂಡಿ | ಹೊರ್ತಿ, ಹೀರೆರೂಗಿ, ಸಾಲೋಟಗಿ, ಹಲಸಂಗಿ. | 4 |
| | ಜಮಖಂಡಿ | ಕಟ್ಟಿಕೆರೆ | 1 | | ಸಿಂದಗಿ | ಯಂಕಂಚಿ, ದೇವರಹಿಪ್ಪರಗಿ, ಚಟ್ಟರಕಿ, ಕಡ್ಲೆವಾಡ. | 4 |

2020-26ರ ಪ್ರವಾಸೋದ್ಯಮ ನೀತಿಯಡಿ ಬಾಗಲಕೋಟೆ ಜಿಲ್ಲೆಯ ಐಹೊಳೆ, ಬಾದಾಮಿ, ಪಟ್ಟದಕಲ್ಲು ಕೂಡಲ ಸಂಗಮಗಳನ್ನು ಹಾಗೂ ವಿಜಯಪುರ ಜಿಲ್ಲೆಯನ್ನು ಆದ್ಯತಾ ಪ್ರವಾಸಿ ತಾಣವಾಗಿ ಪ್ರವಾಸಿ ಕೇಂದ್ರಗಳೆಂದು ಗುರುತಿಸಲಾಗಿತ್ತು.

ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಗಳನ್ನೂಳಗೊಂಡಂತೆ ಇಡೀ ರಾಜ್ಯಕ್ಕೆ ಅನ್ವಯವಾಗುವ ಕರ್ನಾಟಕ ಪ್ರವಾಸೋದ್ಯಮ ನೀತಿ 2024-29 ಅನ್ನು ಜಾರಿಗೆ ತರಲಾಗಿರುತ್ತದೆ.

ಈ ನೀತಿಯಡಿ ಗುರುತಿಸಲಾಗಿರುವ 25 ಪ್ರವಾಸಿ ಉತ್ಪನ್ನಗಳನ್ನು ಅಭಿವೃದ್ಧಿಪಡಿಸಲು ಮುಂದೆ ಬರುವ ಖಾಸಗಿ ಬಂಡವಾಳ ಹೂಡಿಕೆದಾರರನ್ನು ಸೆಳೆಯಲು ಸಹಾಯಧನ, ಪ್ರೋತ್ಸಾಹಕಗಳು ಮತ್ತು ರಿಯಾಯಿತಿಗಳನ್ನು ನೀಡಲು ಅವಕಾಶ ಕಲ್ಪಿಸಲಾಗಿರುತ್ತದೆ. ಹೆಚ್ಚುವರಿಯಾಗಿ ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಗಳನ್ನೊಳಗೊಂಡಂತೆ ಇಡೀ ಕಿತ್ತೂರು ಕರ್ನಾಟಕ ಭಾಗದಲ್ಲಿ ಹೂಡಿಕೆ ಮಾಡಲು ಮುಂದೆ ಬರುವ ಖಾಸಗಿ ಹೂಡಿಕೆದಾರರಿಗೆ ಹೆಚ್ಚುವರಿಯಾಗಿ ಶೇ.5 ರಷ್ಟು ಸಹಾಯಧನವನ್ನು ನೀಡಲು ಅವಕಾಶವನ್ನು ಕಲ್ಪಿಸಲಾಗಿರುತ್ತದೆ.

--2

ಬಾಗಲಕೋಟೆ ಮತ್ತು ವಿಜಯಪುರ ಅವಳಿ ಜಿಲ್ಲೆಗಳಲ್ಲಿನ ಪ್ರವಾಸಿ ತಾಣಗಳಾದ ಬದಾಮಿ, ಬನಶಂಕರಿ, ಐಹೊಳೆ, ಪಟ್ಟದಕಲ್ಲು, ಗೋಲಗುಂಬಜ್, ಶಿವನ ಮಂದಿರ, ಆಲಮಟ್ಟಿ ಜಲಾಶಯದ ಹಿನ್ನೀರಿನಲ್ಲಿರುವ ಪಕ್ಷಿಧಾಮ ಪ್ರಮುಖ ಪ್ರೇಕ್ಷಣೀಯ ಸ್ಥಳಗಳಾಗಿವೆ. ಬಾಗಲಕೋಟೆ ಜಿಲ್ಲೆಯ ಬಾದಾಮಿ ಗುಹಾಂತರ ದೇವಾಲಯ, ಐಹೊಳೆ ದುರ್ಗಾ ದೇವಾಲಯ ಸಂಕೀರ್ಣ ಮತ್ತು ವಿಶ್ವ ಪರಂಪರೆ ಸ್ಮಾರಕ ಪಟ್ಟದಕಲ್ಲು ದೇವಾಲಯಗಳ ಸಮೂಹ ಹಾಗೂ ವಿಜಯಪುರ ಜಿಲ್ಲೆಯ ಗೋಲಗುಂಬಜ್ ಈ ಸ್ಥಳಗಳ ಸ್ಮಾರಕಗಳ ನಿರ್ವಹಣೆ ಹಾಗೂ ಉಸ್ತುವಾರಿಯನ್ನು ಭಾರತೀಯ ಪುರಾತತ್ವ ಸಂರಕ್ಷಣಾ (ASI) ರವರ ವ್ಯಾಪ್ತಿಗೆ ಒಳಪಡುತ್ತದೆ. ಬನಶಂಕರಿ ದೇವಾಲಯವು ಶ್ರೀ ಬನಶಂಕರಿ ದೇವಸ್ಥಾನ ಟ್ರಸ್ಟ್ ಸಮಿತಿ ರವರ ಹಾಗೂ ವಿಜಯಪುರ ಜಿಲ್ಲೆಯ ಶಿವನ ಮಂದಿರವು ಖಾಸಗಿ ಟ್ರಸ್ಟ್ ನವರ ಅಧೀನದಲ್ಲಿರುತ್ತದೆ. ಆಲಮಟ್ಟಿ ಹಿನ್ನೀರಿನಲ್ಲಿರುವ ಪಕ್ಷಿ ಮೀಸಲು ಧಾಮವು ಅರಣ್ಯ ಇಲಾಖೆಯವರ ಅಧೀನದಲ್ಲಿರುತ್ತದೆ. ಆದ್ದರಿಂದ, ಪಕ್ಷಿ ತಾಣಗಳನ್ನು ನಿರ್ಮಿಸುವುದು ಇಲಾಖೆಯ ವ್ಯಾಪ್ತಿಯಲ್ಲಿರುವುದಿಲ್ಲ.

ಬಾಗಲಕೋಟೆ ಜಿಲ್ಲೆಯ ಐಹೊಳೆ ಗ್ರಾಮದ ಐತಿಹಾಸಿಕ ಮತ್ತು ಪಾರಂಪರಿಕ ಸ್ಮಾರಕಗಳನ್ನು ಸಂರಕ್ಷಿಸುವ ಸಲುವಾಗಿ ಸ್ಮಾರಕಗಳನ್ನೇ ಮನೆಗಳನ್ನಾಗಿ ಪರಿವರ್ತಿಸಿಕೊಂಡು ವಾಸಮಾಡುತ್ತಿರುವ ಸುಮಾರು 135 ಕುಟುಂಬಗಳನ್ನು ಸ್ಥಳಾಂತರಿಸಿ, ಪುನರ್ ವಸತಿ ಕಲ್ಪಿಸುವ ದೃಷ್ಟಿಯಿಂದ ಐಹೊಳೆ ಗ್ರಾಮದ ಸರ್ವೆ ನಂ. 218 ಮತ್ತು 225ರ ಭೂ-ಮಾಲೀಕರಿಂದ ಜಮೀನನ್ನು ಖರೀದಿಸಿ ಸ್ಥಳಾಂತರಿಸಲು ಸರ್ಕಾರಿ ಆದೇಶ ಸಂಖ್ಯೆ:ಟಿಓಆರ್ 120 ಟಿಡಿಎ 2023 ದಿನಾಂಕ:16.02.2024 ಹಾಗೂ ಸರ್ಕಾರಿ ಆದೇಶ ಸಂಖ್ಯೆ: ಟಿಓಆರ್ 120 ಟಿಡಿಎ 2023 ದಿನಾಂಕ:05.03.2024ರನ್ವಯ ರೂ.3.50 ಕೋಟಿಗಳ ಅನುದಾನವನ್ನು ಚಾಲುಕ್ಯ ಪಾರಂಪರಿಕ ಪ್ರದೇಶ ನಿರ್ವಹಣಾ ಪ್ರಾಧಿಕಾರಕ್ಕೆ ಬಿಡುಗಡೆಗೊಳಿಸಲಾಗಿದೆ. 135 ಕುಟುಂಬಗಳು ಪುನರ್ವಸತಿಗೆ ಒಪ್ಪಿಗೆಯನ್ನು ನೀಡಿದ್ದು ಈ ಕಾರ್ಯಕ್ಕೆ ರೈತರು ಜಮೀನನ್ನು ನೀಡಲು ಒಪ್ಪಿಗೆ ಸೂಚಿಸಿರುತ್ತಾರೆ. ಬಾಕಿ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.

ಈ 135 ಕುಟುಂಬಗಳನ್ನು ಸ್ಥಳಾಂತರಿಸಿ, ಪುನರ್ ವಸತಿ ಕಲ್ಪಿಸಿದ ನಂತರ ಎಂಟು ಸ್ಮಾರಕಗಳ ಸಂರಕ್ಷಣೆಯನ್ನು ಅಂದಾಜು ರೂ.8-10 ಕೋಟಿಗಳ ವೆಚ್ಚದಲ್ಲಿ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಧರ್ಮೋತ್ಥಾನ ಟ್ರಸ್ಟ್ ಶೇ.50 ಮತ್ತು ಸರ್ಕಾರದ ವಂತಿಗೆ ಶೇ.50 ರಷ್ಟು ಅನುಪಾತದಲ್ಲಿ ವೆಚ್ಚವನ್ನು ಭರಿಸಿ ಸದರಿ ಟ್ರಸ್ಟ್ ವತಿಯಿಂದ ಸಂರಕ್ಷಣೆಯನ್ನು ಕೈಗೊಳ್ಳಲು ದಿನಾಂಕ:05/03/2024ರಂದು ಚಾಲುಕ್ಯ ಪಾರಂಪರಿಕ ಪ್ರದೇಶ ನಿರ್ವಹಣಾ ಪ್ರಾಧಿಕಾರ, ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಹಾಗೂ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಧರ್ಮೋತ್ಥಾನ ಟ್ರಸ್ಟ್ ಗಳ ನಡುವೆ ತ್ರಿಪಕ್ಷೀಯ ಒಡಂಬಡಿಕೆ ಮಾಡಿಕೊಳ್ಳಲಾಗಿದೆ.

ಪ್ರಸ್ತುತ, ಐಹೊಳೆ ಗ್ರಾಮದ ಪುರಾತತ್ವ ಸ್ಮಾರಕದ ವ್ಯಾಪ್ತಿಯಲ್ಲಿ ಬರುವ 135 ಕುಟುಂಬಗಳ ಪುನರ್‌ವಸತಿಗಾಗಿ ಐಹೊಳೆ ಗ್ರಾಮದ ವ್ಯಾಪ್ತಿಯಲ್ಲಿ ಬರುವ ಒಟ್ಟು 13 ಎಕರೆ 11 ಗುಂಟೆ ಜಮೀನನ್ನು ರೂ.2,92,05,000/-ಗಳ ಅಂದಾಜು ಮೊತ್ತದಲ್ಲಿ ನೇರ ಖರೀದಿ ಪಡೆದು, ಯೋಜನಾ ಪ್ರಾಧಿಕಾರ, ಬಾಗಲಕೋಟೆ ಇವರಿಂದ ಉದ್ದೇಶಿತ ವಸತಿ ವಿನ್ಯಾಸ ರಚನೆಗೆ ಕ್ರಮ ಕೈಗೊಳ್ಳಲಾಗಿರುತ್ತದೆ.

ಪಟ್ಟದಕಲ್ಲು ಪ್ರವಾಸಿ ತಾಣದಲ್ಲಿ ಪ್ರವಾಸಿಗರಿಗೆ ಪಾರ್ಕಿಂಗ್ ಸೌಲಭ್ಯ, ಕೆಫೆಟೇರಿಯಾ, ಪ್ರವಾಸಿ ಮಾಹಿತಿ ಕೇಂದ್ರ, ಕರಕುಶಲ ಮಳಿಗೆ ಇತ್ಯಾದಿ ಸೌಲಭ್ಯಗಳನ್ನು ಒಂದೇ ಸೂರಿನಲ್ಲಿ ಒದಗಿಸಲು ರೂ.29.25 ಕೋಟಿ ಅಂದಾಜು ವೆಚ್ಚದಲ್ಲಿ ಪ್ರವಾಸಿ ಪ್ಲಾಜಾ ಕಾಮಗಾರಿಯನ್ನು ಕೈಗೊಳ್ಳಲಾಗುತ್ತಿದೆ.

ಬಾಗಲಕೋಟೆ ಜಿಲ್ಲೆಯಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ ಸಂಬಂಧ ಬಂಡವಾಳ ವೆಚ್ಚಗಳು ಹಾಗೂ ಕೆ.ಟಿ.ವಿ.ಜಿ ಲೆಕ್ಕಶೀರ್ಷಿಕೆ ಅಡಿ ಕಳೆದ 5 ವರ್ಷಗಳಲ್ಲಿ ಇಲಾಖೆಯಿಂದ ರೂ.7693.75 ಲಕ್ಷಗಳ ಅಂದಾಜು ವೆಚ್ಚದಲ್ಲಿ 19 ಕಾಮಗಾರಿಗಳನ್ನು ಕೈಗೊಂಡಿದ್ದು, ರೂ.5218.75 ಲಕ್ಷಗಳ ಅನುದಾನವನ್ನು ಸಂಬಂಧಪಟ್ಟ ಅನುಷ್ಠಾನ ಸಂಸ್ಥೆಗಳಿಗೆ ಬಿಡುಗಡೆ ಮಾಡಲಾಗಿದೆ. ಕಾಮಗಾರಿಗಳು ವಿವಿಧ ಹಂತದಲ್ಲಿರುತ್ತವೆ. ಕಾಮಗಾರಿಗಳ ವಿವರವನ್ನು **ಅನುಬಂಧ-1ರಲ್ಲಿ** ಒದಗಿಸಿದೆ.

2024-25ನೇ ಸಾಲಿನ ಆಯವ್ಯಯ ಭಷಣದ ಕಂಡಿಕೆ 373 ರಲ್ಲಿ "ರಾಜ್ಯದ ಪ್ರಮುಖ ಜಲಾಶಯಗಳಲ್ಲಿನ ಹಿನ್ನೀರಿನಲ್ಲಿ ಮತ್ತು ಕಡಲ ತೀರಗಳಲ್ಲಿ ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಜಲಕ್ರೀಡೆಗಳು ಮತ್ತು ಜಲಸಾಹಸ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸಲಾಗುವುದು ಎಂಬುದಾಗಿ ಘೋಷಿಸಿರುವ ಪ್ರಯುಕ್ತ ಆಲಮಟ್ಟಿ ಅಣೆಕಟ್ಟು ಹಿನ್ನೀರಿನ ಪ್ರದೇಶದಲ್ಲಿ ಜಲಸಾಹಸ ಪ್ರವಾಸೋದ್ಯಮವನ್ನು ಉತ್ತೇಜಿಸಲು ಕೆ.ಬಿ.ಜೆ.ಎನ್.ಎಲ್ ಹಾಗೂ ಅರಣ್ಯ ಇಲಾಖೆಯ ಜೊತೆ ಸಮನ್ವಯ ಸಾಧಿಸಿ ಜಲಕ್ರೀಡೆಗಳನ್ನು ಆಯೋಜನೆ ಮಾಡಲು ಕ್ರಮವಹಿಸಲಾಗುತ್ತಿದೆ.

ವಿಜಯಪುರ ಜಿಲ್ಲೆಯಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ ಸಂಬಂಧ ಬಂಡವಾಳ ವೆಚ್ಚಗಳು ಹಾಗೂ ಕೆ.ಟಿ.ವಿ.ಜಿ ಲೆಕ್ಕಶೀರ್ಷಿಕೆ ಅಡಿ ಕಳೆದ 5 ವರ್ಷಗಳಲ್ಲಿ ಇಲಾಖೆಯಿಂದ ರೂ. 4069.00 ಲಕ್ಷಗಳ ಅಂದಾಜು ವೆಚ್ಚದಲ್ಲಿ 27 ಕಾಮಗಾರಿಗಳನ್ನು ಕೈಗೊಂಡಿದ್ದು, ರೂ.2949.00 ಲಕ್ಷಗಳ ಅನುದಾನವನ್ನು ಸಂಬಂಧಪಟ್ಟ ಅನುಷ್ಠಾನ ಸಂಸ್ಥೆಗಳಿಗೆ ಬಿಡುಗಡೆ ಮಾಡಲಾಗಿದೆ. ಕಾಮಗಾರಿಗಳು ವಿವಿಧ ಹಂತದಲ್ಲಿರುತ್ತವೆ. ಕಾಮಗಾರಿಗಳ ವಿವರವನ್ನು **ಅನುಬಂಧ-2ರಲ್ಲಿ** ಒದಗಿಸಿದೆ.

ಆಯವ್ಯಯದಲ್ಲಿ ಒದಗಿಸುವ ಅನುದಾನದ ಲಭ್ಯತೆಗನುಗುಣವಾಗಿ ಬಾಗಲಕೋಟೆ ಮತ್ತು ವಿಜಯಪುರ ಜಿಲ್ಲೆಗಳಲ್ಲಿ ಪ್ರವಾಸಿ ತಾಣಗಳನ್ನು ಆದ್ಯತೆ ಮೇರೆಗೆ ಅಭಿವೃದ್ಧಿ ಪಡಿಸುವ ಬಗ್ಗೆ ಪರಿಶೀಲಿಸಲಾಗುವುದು.

(ಎಚ್.ಕೆ.ಪಾಟೀಲ)
ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ
ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ
ಪ್ರವಾಸೋದ್ಯಮ ಸಚಿವರು

**ಎಚ್.ಕೆ ಪಾಟೀಲ**
**ಕಾನೂನು, ನ್ಯಾಯ, ಮಾನವ ಹಕ್ಕುಗಳು**
**ಸಂಸದೀಯ ವ್ಯವಹಾರಗಳು, ಶಾಸನ ರಚನೆ**
**ಹಾಗೂ ಪ್ರವಾಸೋದ್ಯಮ ಸಚಿವರು**

**ಸಂಖ್ಯೆ:ಟಿ.ಓ.ಆರ್. 29 ಟಿ.ಡಿ.ವಿ 2025**

# ಪ್ರವಾಸೋದ್ಯಮ ಇಲಾಖೆ

## ಶ್ರೀ ನಿರಾಣಿ ಹಣಮಂತ ರುದ್ರಪ್ಪ, ಮಾನ್ಯ ವಿಧಾನಪರಿಷತ್ ಸದಸ್ಯರು ರವರುಗಳು ಸಲ್ಲಿಸಿರುವ 72 ನೇ ನಿಯಮದ ಮೇರೆಗೆ ಸೂಚನೆಗೆ ಅನುಬಂಧ-1

(ರೂ. ಲಕ್ಷಗಳಲ್ಲಿ)

| ಕ್ರ. ಸಂ | ಯೋಜನೆಗಳ ವಿವರ | ಮಂಜೂರಾದ ವರ್ಷ | ಅಂದಾಜು ಮೊತ್ತ | ಈವರೆಗೂ ಬಿಡುಗಡೆ ಮಾಡಿರುವ ಅನುದಾನ | ಪ್ರಸ್ತುತ ಹಂತ |
|---|---|---|---|---|---|
| | ಬಾಗಲಕೋಟೆ ಜಿಲ್ಲೆ | | | | |
| 1 | ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲಲ್ಲೂಕಿನ ಬಾಗಲಕೋಟೆ-ಬಿಳಿಗಿರಿರಂಗನಬೆಟ್ಟ ರಾಹೆ-57 ರ ಕಿ.ಮೀ. 7.73 ರಿಮದ 29.38 ರ ವರೆಗೆ ಹಾಗೂ 34.10 ರಿಂದ 37.80 ರ ವರೆಗೆ ರಸ್ತೆ ಸುಧಾರಣೆ ಮಾಡುವುದು. | 2018-19 | 891.00 | 891.00 | ಕಾಮಗಾರಿ ಪೂರ್ಣಗೊಂಡಿದೆ. |
| 2 | ಬಾಗಲಕೋಟೆ ಜಿಲ್ಲೆ ಹುನಗುಂದ ತಾಲ್ಲೂಕಿನ ನಂದವಾಡಗಿ ಗ್ರಾಮದ ಶ್ರೀ ಮಹಾಂತೇಶ್ವರ ಸಂಸ್ಥಾನ ಬೃಹನ್ಮಠದ ಬಳಿ ಯಾತ್ರಿನಿವಾಸ ನಿರ್ಮಾಣ. | 2018-19 | 50.00 | 50.00 | ಮುಕ್ತಾಯಹಂತದಲ್ಲಿ |
| 3 | ಬೀಳಗಿ ತಾಲ್ಲೂಕಿನ ಹೊನ್ನಿಹಾಳ ಪುನರ್‌ವಸತಿ ಕೇಂದ್ರದಲ್ಲಿರುವ ಸೋಮನಾಥ ದೇವಾಲಯ ಆವರಣದಲ್ಲಿ ಯಾತ್ರಿನಿವಾಸ ನಿರ್ಮಾಣ. | 2018-19 | 25.00 | 25.00 | ಕಾಮಗಾರಿ ಪೂರ್ಣಗೊಂಡಿದೆ. |
| 4 | ಬಾಗಲಕೋಟ ಜಿಲ್ಲೆಯ ಬಾದಾಮಿಯಲ್ಲಿ 72 ಕೊಠಡಿಗಳ ತ್ರಿ-ಸ್ಟಾರ್ ಹೋಟೆಲ್ ನಿರ್ಮಾಣ | 2019-20 | 1832.00 | 1146.00 | ಪ್ರಗತಿಯಲ್ಲಿದೆ |
| 5 | ಬಾಗಲಕೋಟೆ ಜಿಲ್ಲೆಯ ಪಟ್ಟದಕಲ್ಲಿನಲ್ಲಿರುವ ಇಲಾಖೆಯ 24 ಎಕರೆ ಜಮೀನಿನಲ್ಲಿ ಟೂರಿಸಂ ಪ್ಲಾಜಾ ನಿರ್ಮಾಣ | 2019-20 | 2925.00 | 2393.00 | ಪ್ರಗತಿಯಲ್ಲಿದೆ. |
| 6 | ಬಾಗಲಕೋಟೆ ಜಿಲ್ಲೆ, ಹುನಗುಂದ ತಾಲ್ಲೂಕು, ಪಾಪನಾಳ ಗ್ರಾಮ ಶ್ರೀ ಪಾಪೇಶ್ವರ ದೇವಸ್ಥಾನದ ಹತ್ತಿರ ಯಾತ್ರಿನಿವಾಸ | 2019-20 | 100.00 | 100.00 | ಕಾಮಗಾರಿ ಪೂರ್ಣಗೊಂಡಿದೆ |
| 7 | ತೇರದಾಳ ಶ್ರೀ ಅಲ್ಲಮಪ್ರಭು ದೇವಸ್ಥಾನದ ಬಳಿ ಯಾತ್ರಿನಿವಾಸ ಕುಡಿಯುವ ನೀರು, ರಸ್ತೆ ನಿರ್ಮಾಣ, ಗಾರ್ಡನ್‌ಗಳ ನವೀಕರಣ ಹಾಗೂ ಮೂಲಭೂತ ಸೌಕರ್ಯಗಳ ಅಭಿವೃದಿ | 2019-20 | 15.00 | 5.00 | ಫ್ಲೋರಿಂಗ್ ಕೆಲಸ ಪ್ರಗತಿಯಲ್ಲಿದೆ. |

(ರೂ. ಲಕ್ಷಗಳಲ್ಲಿ)

| ಕ್ರ. ಸಂ | ಯೋಜನೆಗಳ ವಿವರ | ಮಂಜೂರಾದ ವರ್ಷ | ಅಂದಾಜು ಮೊತ್ತ | ಈವರೆಗೂ ಬಿಡುಗಡೆ ಮಾಡಿರುವ ಅನುದಾನ | ಪ್ರಸ್ತುತ ಹಂತ |
|---|---|---|---|---|---|
| 8 | ಜಮಖಂಡಿ ತಾಲ್ಲೂಕು, ಕುಲಹಳ್ಳಿ ಗ್ರಾಮದ ಶ್ರೀ ಶಿದಗಿರೇಶ್ವರ ದೇವಸ್ಥಾನದ ಬಳಿ ಯಾತ್ರಿನಿವಾಸ ನಿರ್ಮಾಣ, ಕುಡಿಯುವ ನೀರು, ರಸ್ತೆ ನಿರ್ಮಾಣ, ಗಾರ್ಡನ್‌ಗಳ ನವೀಕರಣ ಮತ್ತು ಮೂಲಭೂತ ಸೌಕರ್ಯ ಅಭಿವೃದ್ಧಿ | 2019-20 | 25.00 | 5.00 | ಕಾಮಗಾರಿ ಪ್ರಾರಂಭಿಸ ಬೇಕಿದೆ |
| 9 | ಬನಹಟ್ಟಿ ನಗರದ ಹಳೆಯಲ್ಲಮ್ಮ ದೇವಸ್ಥಾನದ ಆವರಣದಲ್ಲಿ ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಕಾಮಗಾರಿಗಳಲ್ಲಿ ಚೈನ್‌ಲಿಂಕ್, ಆಸನಗಳ ವ್ಯವಸ್ಥೆ ಹಾಗೂ ವಾಹನ ನಿಲುಗಡೆ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸುವ ಕಾಮಗಾರಿ | 2019-20 | 20.00 | 20.00 | ಕಾಮಗಾರಿ ಪೂರ್ಣಗೊಂಡಿದೆ |
| 10 | ಜಮಖಂಡಿ ತಾಲ್ಲೂಕು ಮೈಗೂರು ಗ್ರಾಮದ ಶ್ರೀ ಶಿವಾನಂದ ಮಠದ ಬಳಿ ಯಾತ್ರಿನಿವಾಸ ಹಾಗೂ ಮೂಲಭೂತ ಸೌಕರ್ಯ ಅಭಿವೃದ್ಧಿ. | 2019-20 | 75.00 | 65.00 | ಪೂರ್ಣ ಗೊಂಡಿದೆ. |
| 11 | ಬಾಗಲಕೋಟೆ ಜಿಲ್ಲೆಯ ಬಾದಾಮಿಯ ಗುಹಾಂತರ ದೇವಾಲಯ ಪ್ರದೇಶದಲ್ಲಿ ಪ್ರವಾಸಿ ಮೂಲಭೂತ ಸೌಕರ್ಯಗಳ ಅಭಿವೃದ್ಧಿ | 2019-20 | 500.00 | 0.00 | ಪ್ರಾರಂಭಿಸಬೇಕಿದೆ |
| 12 | ಬಾದಾಮಿಯ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದ ಪೂರ್ವ ಭಾಗದಲ್ಲಿ ಖಾಲಿ ಇರುವ 9 ಎಕರೆ 8 ಗುಂಟೆ ಜಮೀನನ್ನು ಪ್ರತಿ ಚದರ ಅಡಿಗೆ ರೂ.100/- ಗಳಂತೆ 10 ವರ್ಷಗಳ ಅವಧಿಗೆ ಲೀಸ್-ಕಂ-ಸೇಲ್ ಆಧಾರದ ಮೇಲೆ ಖರೀದಿಸುವ ಬಗ್ಗೆ | 2020-21 | 400.75 | 400.75 | ಜಮೀನು ಹಸ್ತಾಂತರಿಸಬೇಕಿದೆ |
| 13 | ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲ್ಲೂಕು, ಯಡಹಳ್ಳಿ, ಇಂಗಳಗಿಯ ಶ್ರೀ ಅಡವೇಶ್ವರ ಮಠ (ವ್ಹೀ ಅಡವಿ ಮಠ) ಇಲ್ಲಿ ಯಾತ್ರಿನಿವಾಸ ನಿರ್ಮಾಣ ಕಾಮಗಾರಿ | 2022-23 | 300.00 | 0.00 | ಈ ಕಾಮಗಾರಿ ಅನುಷ್ಠಾನಗೊಳಿಸುವ ಬಗ್ಗೆ ಸರ್ಕಾರದ ಅನುಮೋದನೆಗಾಗಿ ಪ್ರಸ್ತಾವನೆ ಸಲ್ಲಿಸಿದ್ದು, ನಿರ್ದೇಶನ ಬಂದ ನಂತರ ಕಾಮಗಾರಿ ಪ್ರಾರಂಭಿಸ ಬೇಕಿದೆ |

(ರೂ. ಲಕ್ಷಗಳಲ್ಲಿ)

| ಕ್ರ. ಸಂ | ಯೋಜನೆಗಳ ವಿವರ | ಮಂಜೂರಾದ ವರ್ಷ | ಅಂದಾಜು ಮೊತ್ತ | ಈವರೆಗೂ ಬಿಡುಗಡೆ ಮಾಡಿರುವ ಅನುದಾನ | ಪ್ರಸ್ತುತ ಹಂತ |
|---|---|---|---|---|---|
| 14 | ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲ್ಲೂಕಿನ ಕೂಡಲಸಂಗಮ ಅಭಿನವ ಜಾತವೇದ ಶಿವಾಚಾರ್ಯ ಸಾರಂಗ ಮಠದ ಹತ್ತಿರ ಯಾತ್ರಿನಿವಾಸ, ಕುಡಿಯುವ ನೀರು ಹಾಗೂ ಶೌಚಾಲಯ ಕಟ್ಟಡ ನಿರ್ಮಾಣ ಕಾಮಗಾರಿ | 2022-23 | 100.00 | 0.00 | ಪ್ರಾರಂಭಿಸ ಬೇಕಿದೆ. |
| 15 | ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲ್ಲೂಕಿನ ಸುಕ್ಷೇತ್ರ ಹಂಚಿನಾಳ ಗ್ರಾಮದ ಶ್ರೀ ಸುವರ್ಣಖಂಡಿ ಸಂಗಮೇಶ್ವರ, ದೊಡ್ಡ ಬಸವೇಶ್ವರ ದೇವಸ್ಥಾನದ ಬಳಿ ಯಾತ್ರಿನಿವಾಸ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಕಾಮಗಾರಿಗಳು | 2022-23 | 50.00 | 0.00 | ಈ ಕಾಮಗಾರಿ ಅನುಷ್ಠಾನಗೊಳಿಸುವ ಬಗ್ಗೆ ಸರ್ಕಾರದ ಅನುಮೋದನೆಗಾಗಿ ಪ್ರಸ್ತಾವನೆ ಸಲ್ಲಿಸಿದ್ದು, ನಿರ್ದೇಶನ ಬಂದ ನಂತರ ಕಾಮಗಾರಿ ಪ್ರಾರಂಭಿಸ ಬೇಕಿದೆ |
| 16 | ಬಾಗಲಕೋಟೆ ಜಿಲ್ಲೆಯ ಬಾದಾಮಿ ಪಟ್ಟಣದ ಬನಶಂಕರಮ್ಮ ದೇವಸ್ಥಾನದ ಮುಂದಿರುವ ಹರಿದ್ರಾನಾಥ ಪುಷ್ಕರಣಿಯನ್ನು (ಹೊಂಡ) ಸ್ವಚ್ಛಗೊಳಿಸುವ ಕಾಮಗಾರಿ. | 2022-23 | 100.00 | 0.00 | ಈ ಕಾಮಗಾರಿ ಅನುಷ್ಠಾನಗೊಳಿಸುವ ಬಗ್ಗೆ ಸರ್ಕಾರದ ಅನುಮೋದನೆಗಾಗಿ ಪ್ರಸ್ತಾವನೆ ಸಲ್ಲಿಸಿದ್ದು, ನಿರ್ದೇಶನ ಬಂದ ನಂತರ ಕಾಮಗಾರಿ ಪ್ರಾರಂಭಿಸ ಬೇಕಿದೆ |
| 17 | ಬಾಗಲಕೋಟೆ ಜಿಲ್ಲೆ ಬೀಳಗಿ ತಾಲ್ಲೂಕಿನ ಕುಂದರಗಿ ಶ್ರೀ ಭುವನೇಶ್ವರಿ ದೇವಿ ದೇವಸ್ಥಾನ ಸುರಗಿರಿ ಬೆಟ್ಟದಲ್ಲಿ ಮೂಲಭೀತ ಸೌಲಭ್ಯ ಕಾಮಗಾರಿ | 2023-24 | 50.00 | 16.00 | ಅಂದಾಜು ಪಟ್ಟಿ ಸಿದ್ಧಪಡಿಸಲು ಕ್ರಮವಹಿಸಲಾಗಿದೆ. |
| 18 | ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲ್ಲೂಕಿನ ಶಿವಯೋಗ ಮಂದಿರ ಸುಕ್ಷೇತ್ರಕ್ಕೆ ಆಗಮಿಸುವ ಭಕ್ತಾದಿಗಳು / ಪ್ರವಾಸಿಗಳಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವ ದೃಷ್ಠಿಯಿಂದ ಪುರುಷರು ಮತ್ತು ಮಹಿಳೆಯರ ಸ್ನಾನಗೃಹ ಮತ್ತು ಶೌಚಾಲಯಗಳ ನಿರ್ಮಾಣ ಕಾಮಗಾರಿ | 2023-24 | 35.00 | 35.00 | ಈ ಕಾಮಗಾರಿ ಅನುಷ್ಠಾನಗೊಳಿಸುವ ಬಗ್ಗೆ ಸರ್ಕಾರದ ಅನುಮೋದನೆಗಾಗಿ ಪ್ರಸ್ತಾವನೆ ಸಲ್ಲಿಸಿದ್ದು, ನಿರ್ದೇಶನ ಬಂದ ನಂತರ ಕಾಮಗಾರಿ ಪ್ರಾರಂಭಿಸ ಬೇಕಿದೆ |

(ರೂ. ಲಕ್ಷಗಳಲ್ಲಿ)

| ಕ್ರ. ಸಂ | ಯೋಜನೆಗಳ ವಿವರ | ಮಂಜೂರಾದ ವರ್ಷ | ಅಂದಾಜು ಮೊತ್ತ | ಈವರೆಗೂ ಬಿಡುಗಡೆ ಮಾಡಿರುವ ಅನುದಾನ | ಪ್ರಸ್ತುತ ಹಂತ |
|---|---|---|---|---|---|
| 19 | ಬಾಗಲಕೋಟೆ ಜಿಲ್ಲೆ ಬೀಳಗಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಚಿಕ್ಕಸಂಗಮ ಪ್ರವಾಸಿ ತಾಣದಲ್ಲಿ ಮೂಲಭೂತ ಸೌಲಭ್ಯ ಕಲ್ಪಿಸುವುದು. | 2023-24 | 200.00 | 67.00 | ಈ ಕಾಮಗಾರಿ ಅನುಷ್ಠಾನಗೊಳಿಸುವ ಬಗ್ಗೆ ಸರ್ಕಾರದ ಅನುಮೋದನೆಗಾಗಿ ಪ್ರಸ್ತಾವನೆ ಸಲ್ಲಿಸಿದ್ದು, ನಿರ್ದೇಶನ ಬಂದ ನಂತರ ಕಾಮಗಾರಿ ಪ್ರಾರಂಭಿಸ ಬೇಕಿದೆ |
| | ಒಟ್ಟು | | **7693.75** | **5218.75** | |

ಅನುಬಂಧ-8

(ರೂ. ಲಕ್ಷಗಳಲ್ಲಿ)

| ಕ್ರ. ಸಂ | ಯೋಜನೆಗಳ ವಿವರ | ಮಂಜೂರಾದ ವರ್ಷ | ಅಂದಾಜು ಮೊತ್ತ | ಈವರೆಗೂ ಬಿಡುಗಡೆ ಮಾಡಿರುವ ಅನುದಾನ | ಪ್ರಸ್ತುತ ಹಂತ |
|---|---|---|---|---|---|
| | **ವಿಜಯಪುರ ಜಿಲ್ಲೆ** | | | | |
| 1 | ವಿಜಯಪೂರ ಜಿಲ್ಲೆ ಬಸವನಬಾಗೇವಾಡಿ ಡಿಂಡವಾರ ಗ್ರಾಮ ಶ್ರೀ ಶ್ರೀ ಮುರುಗರಾಜೇಂದ್ರ ಶಿವಾಚಾರ್ಯ ಮತ್ತು ಶ್ರೀ ಶ್ರೀ ರುದ್ರಮುನಿ ಶಿವಾಚಾರ್ಯ ಮಠ ದಿಂಡವಾರ ಹತ್ತಿರ ಮೂಲಭೂತ ಸೌಕರ್ಯ. | 2018-19 | 50.00 | 25.00 | ಕಾಮಗಾರಿ ಪ್ರಾರಂಭಿಸ ಬೇಕಿದೆ |
| 2 | ಸಿಂದಗಿ ಬೈಪಾಸ ದಿಂದ ಗೋಲಗುಮ್ಮಟ ವರೆಗೆ ರಸ್ತೆ ಸುಧಾರಣೆ ಮಾಡುವುದು. | 2018-19 | 100.00 | 100.00 | ಪೂರ್ಣ ಗೊಂಡಿದೆ. |
| 3 | ವಿಜಯಪುರ ಜಿಲ್ಲೆ, ಸಿಂಧಗಿ ಪಟ್ಟಣದಲ್ಲಿರುವ ಶ್ರೀ ಸಂಗಮೇಶ್ವರ ಕೆರೆಯಲ್ಲಿ ಉದ್ಯಾನವನ ನಿರ್ಮಾಣ, ಮಕ್ಕಳ ಆಟದ ಸೌಲಭ್ಯ, ಏರಿಯ ಮೇಲೆ ಪಾತ್‌ವೇ, ರೈಲಿಂಗ್ಸ್, ಸಂಪರ್ಕ ರಸ್ತೆ, ಪರಗೋಲ, ಗಜಬೋ ನಿರ್ಮಾಣ. | 2018-19 | 100.00 | 100.00 | ಪೂರ್ಣ ಗೊಂಡಿದೆ. |
| 4 | ಬಸನವಬಾಗೇವಾಡಿ ತಾಲ್ಲೂಕಿನ ಅಕಲವಾಡಿ ಗ್ರಾಮದಲ್ಲಿ ಯಾತ್ರಿನಿವಾಸ ನಿರ್ಮಾಣ. | 2019-20 | 25.00 | 10.00 | ಪೂರ್ಣ ಗೊಂಡಿದೆ. |
| 5 | ಇಂಡಿ ತಾಲ್ಲೂಕಿನ ಅಗರಖೇಡ ಗ್ರಾಮದ ಶ್ರೀ ಪ್ರಭುಲಿಂಗೇಶ್ವರ ವಿರಕ್ತ ಮಠದ ಬಳಿ ಯಾತ್ರಿನಿವಾಸ ನಿರ್ಮಾಣ (ಇಂಡಿ ತಾಲ್ಲೂಕು ಅಥರ್ಗಾ ಗ್ರಾಮ ಶ್ರೀ ಸಿದ್ದೇಶ್ವರ ಸ್ವಾಮೀಜಿ ಆಶ್ರಮದ ಬಳಿ ಯಾತ್ರಿನಿವಾಸ ನಿರ್ಮಾಣ ಬದಲಾಗಿ) | 2019-20 | 25.00 | 25.00 | ಕಾಮಗಾರಿ ಪೂರ್ಣಗೊಂಡಿದೆ |
| 6 | ವಿಜಯಪುರ ಜಿಲ್ಲೆ, ಬಬಲೇಶ್ವರ ಕ್ಷೇತ್ರದ ಬಿಜ್ಜರಗಿ ಗ್ರಾಮದ ಶ್ರೀ ಬುದ್ಧವಿಹಾರ ಬುದ್ಧನಗರ ಹತ್ತಿರ ಯಾತ್ರಿನಿವಾಸ ನಿರ್ಮಾಣ. | 2019-20 | 50.00 | 50.00 | ಕಾಮಗಾರಿ ಪೂರ್ಣ ಗೊಂಡಿದೆ. |
| 7 | ವಿಜಯಪುರ ಜಿಲ್ಲೆ, ಮುದ್ದೇಬಿಹಾಳ ವಿಧಾನಸಭಾ ಕ್ಷೇತ್ರ ಸರೂರು ಗ್ರಾಮದ ಶ್ರೀ ರೇವಣಸಿದ್ದೇಶ್ವರ ಗುರುಮಠ ಹತ್ತಿರ ಯಾತ್ರಿನಿವಾಸ ನಿರ್ಮಾಣ. | 2019-20 | 100.00 | 70.00 | ಕಾಮಗಾರಿ ಪೂರ್ಣ ಗೊಂಡಿದೆ. |
| 8 | ವಿಜಯಪುರದಲ್ಲಿ 75 ಕೊಠಡಿಗಳ ತ್ರಿ-ಸ್ಟಾರ್ ಹೋಟೆಲ್ ನಿರ್ಮಾಣ. | 2019-20 | 1674.00 | 1673.00 | ಅಂತಿಮ ಹಂತದಲ್ಲಿದೆ |

(ರೂ. ಲಕ್ಷಗಳಲ್ಲಿ)

| ಕ್ರ. ಸಂ | ಯೋಜನೆಗಳ ವಿವರ | ಮಂಜೂರಾದ ವರ್ಷ | ಅಂದಾಜು ಮೊತ್ತ | ಈವರೆಗೂ ಬಿಡುಗಡೆ ಮಾಡಿರುವ ಅನುದಾನ | ಪ್ರಸ್ತುತ ಹಂತ |
|---|---|---|---|---|---|
| 9 | ವಿಜಯಪುರ ನಗರದ ಆನಂದ ಮಹಲ್ ಪಾರಂಪರಿಕ ಕಟ್ಟಡದಲ್ಲಿ ವಿಜಯಪುರ ಪ್ರವಾಸೋದ್ಯಮ ವ್ಯಾಖ್ಯಾನ ಕೇಂದ್ರವನ್ನು ಸ್ಥಾಪಿಸಲು ಲಟ್ಟಡ ಸಂರಕ್ಷಣೆ ಹಾಗೂ ಇತರೆ ಕಾಮಗಾರಿ | 2019-20 | 500.00 | 500.00 | ಕಾಮಗಾರಿ ಪೂರ್ಣಗೊಂಡಿದೆ. |
| 10 | ಅದಾಲತ್ ಮಹಲ್ (ಅಂಬೇಡ್ಕರ್ ಸರ್ಕಲ್) ದಿಂದ ಕರಿಮದ್ದಿನ ಮಸೀದಿ ಜಂಕ್ಷನ್ ಅರ್ಕಿಲ್ಲಾ, ಬ್ಲಾಕ್ ಕೋಟೆಗೋಡೆವರೆಗಿನ ರಸ್ತೆಯ ಬಲಬದಿಯ ಪುಟಪಾತ್ (ಪೆವರ್ ವರ್ಕ್ಸ್), ರಸ್ತೆ ವಿಭಜಕದ ಪೇಂಟಿಂಗ್ ಹಾಗೂ ಸೈನ್ ಬೋರ್ಡ್ಸ್ ಮತ್ತು ಕೋಟೆ ಗೋಡೆ ಹಾಗೂ ದರಬಾರ್ ಹಾಲ್ ಸ್ಮಾರಕದ ಹಿಂದಿನ (ಲಲಿತ್ ಮಹಲ್ ವರೆಗೆ) ಡಾಂಬರ್ ರಸ್ತೆ ಮತ್ತು ಅದಾಲತ್ ಮಹಲ್ ಮುಂದಿನ ಬಾಕಿ ಉಳಿದ ರಸ್ತೆ ಹಾಗೂ ಸೌಂದರೀಕರಣ | 2021-22 | 60.00 | 60.00 | ಕಾಮಗಾರಿ ಪೂರ್ಣ ಗೊಂಡಿದೆ. |
| 11 | ಗೋಳಗುಮ್ಮಟ ಸ್ಮಾರಕದ (ರೈಲ್ವೆ ಬ್ರಿಜ್ ನಿಂದ-ರೈಲ್ವೆ ಸ್ಟೇಷನ್ ಸರ್ಕಲ್) ಕೋಟೆಗೋಡೆ-ಕಂದಕದಿಂದ ಸ್ಮಾರಕದದಗುಂಟ ಪೂರ್ವದ ರಸ್ತೆ ಸ್ಟೇಷನ್ ಹಿಂದಿನ ರಸ್ತೆ ಸೇರುವ ರಸ್ತೆ ದಕ್ಷಿಣ ಭಾಗದ ರಸ್ತೆ ಹಾಗೂ ಮಳೆ ನೀರು ಚರಂಡಿ ನಿರ್ಮಾಣ ಹಾಗೂ ಸೌಂದರೀಕರಣ ಕಾಮಗಾರಿ | 2021-22 | 140.00 | 140.00 | ಕಾಮಗಾರಿ ಪೂರ್ಣ ಗೊಂಡಿದೆ. |
| 12 | ವಿಜಯಪುರ ನಗರದ ಹಕೀಮ ಚೌಕದಿಂದ ಗೋಲಗುಂಬಜ್‌ವರೆಗೆ ರಸ್ತೆ ಸುಧಾರಣೆ | 2022-23 | 100.00 | 0.00 | ಈ ಕಾಮಗಾರಿ ಅನುಷ್ಠಾನಗೊಳಿಸುವ ಬಗ್ಗೆ ಸರ್ಕಾರದ ಅನುಮೋದನೆಗಾಗಿ ಪ್ರಸ್ತಾವನೆ ಸಲ್ಲಿಸಿದ್ದು, ನಿರ್ದೇಶನ ಬಂದ ನಂತರ ಕಾಮಗಾರಿ ಪ್ರಾರಂಭಿಸ ಬೇಕಿದೆ |
| 13 | ವಿಜಯಪುರ ನಗರದ ವಿಶ್ವ ಪ್ರಸಿದ್ಧ ಗೋಲಗುಂಬಜ್‌ದಿಂದ ರೈಲ್ವೇ ಸ್ಟೇಷನ್ ಮೂಲಕ ರೈಲ್ವೇ ಸ್ಟೇಷನ್ ಹಿಂದಿನ ರಸ್ತೆವರೆಗೆ ರಸ್ತೆ ಅಭಿವೃದ್ಧಿ ಪಡಿಸುವುದು ಹಾಗೂ ಬೀದಿದೀಪ ಅಳವಡಿಸುವುದು. | 2022-23 | 100.00 | 0.00 | ಈ ಕಾಮಗಾರಿ ಅನುಷ್ಠಾನಗೊಳಿಸುವ ಬಗ್ಗೆ ಸರ್ಕಾರದ ಅನುಮೋದನೆಗಾಗಿ ಪ್ರಸ್ತಾವನೆ ಸಲ್ಲಿಸಿದ್ದು, ನಿರ್ದೇಶನ ಬಂದ ನಂತರ ಕಾಮಗಾರಿ ಪ್ರಾರಂಭಿಸ ಬೇಕಿದೆ |

(ರೂ. ಲಕ್ಷಗಳಲ್ಲಿ)

| ಕ್ರ. ಸಂ | ಯೋಜನೆಗಳ ವಿವರ | ಮಂಜೂರಾದ ವರ್ಷ | ಅಂದಾಜು ಮೊತ್ತ | ಈವರೆಗೂ ಬಿಡುಗಡೆ ಮಾಡಿರುವ ಅನುದಾನ | ಪ್ರಸ್ತುತ ಹಂತ |
|---|---|---|---|---|---|
| 14 | ವಿಜಯಪುರ ನಗರದ ಶಾಂತಿನಿಕೇತನ ಕಾಲನಿಯ ಪ್ರವಾಸಿ ತಾಣವಾದ ಕೋಟೆ ಗೋಡೆ ಮೇಲಿನ ಲಾಂಡಕ್ ತೋಪಿನ ಸಂಪರ್ಕ ಕಲ್ಪಿಸುವ ರಸ್ತೆಗಳ ಅಭಿವೃದ್ಧಿಪಡಿಸುವುದು | 2022-23 | 100.00 | 0.00 | ಈ ಕಾಮಗಾರಿ ಅನುಷ್ಠಾನಗೊಳಿಸುವ ಬಗ್ಗೆ ಸರ್ಕಾರದ ಅನುಮೋದನೆಗಾಗಿ ಪ್ರಸ್ತಾವನೆ ಸಲ್ಲಿಸಿದ್ದು, ನಿರ್ದೇಶನ ಬಂದ ನಂತರ ಕಾಮಗಾರಿ ಪ್ರಾರಂಭಿಸ ಬೇಕಿದೆ |
| 15 | ವಿಜಯಪುರ ನಗರದ 1008 ಸಹಸ್ರಫಣಿ ಪಾರ್ಶ್ವನಾಥ ಜೈನ ವೃತ್ತದಿಂದ ಪುರಾತನ ಜೈನ್ ಮಂದಿನ ಮೂಲಕ ಯತ್ನಾಳ ಕ್ರಾಸ್ ವರೆಗೆ ರಸ್ತೆ ಬದಿ ದೀಪಾಲಂಕಾರ (ಬೀದಿ ದೀಪ) ಅಳವಡಿಸುವುದು | 2022-23 | 100.00 | 0.00 | ಈ ಕಾಮಗಾರಿ ಅನುಷ್ಠಾನಗೊಳಿಸುವ ಬಗ್ಗೆ ಸರ್ಕಾರದ ಅನುಮೋದನೆಗಾಗಿ ಪ್ರಸ್ತಾವನೆ ಸಲ್ಲಿಸಿದ್ದು, ನಿರ್ದೇಶನ ಬಂದ ನಂತರ ಕಾಮಗಾರಿ ಪ್ರಾರಂಭಿಸ ಬೇಕಿದೆ |
| 16 | ವಿಜಯಪುರ ನಗರದ ಪುರಾತನ ಪ್ರವಾಸಿ ತಾಣ ಅಡವಿಶಂಕರಲಿಂಗ ದೇವಸ್ಥಾನದ ಹತ್ತಿರ ಪ್ರವಾಸಿಗರಿಗೆ ಯಾತ್ರಾ ನಿವಾಸ ನಿರ್ಮಾಣ | 2022-23 | 100.00 | 0.00 | ಈ ಕಾಮಗಾರಿ ಅನುಷ್ಠಾನಗೊಳಿಸುವ ಬಗ್ಗೆ ಸರ್ಕಾರದ ಅನುಮೋದನೆಗಾಗಿ ಪ್ರಸ್ತಾವನೆ ಸಲ್ಲಿಸಿದ್ದು, ನಿರ್ದೇಶನ ಬಂದ ನಂತರ ಕಾಮಗಾರಿ ಪ್ರಾರಂಭಿಸ ಬೇಕಿದೆ |
| 17 | ಮುದ್ದೇಬಿಹಾಳ ತಾಲ್ಲೂಕು, ಕೋಲೂರು ಗ್ರಾಮದ ಶ್ರೀ ಕೊಟ್ಟೂರು ಬಸವೇಶ್ವರ ದೇವಸ್ಥಾನದ ಬಳಿ ಯಾತ್ರಿನಿವಾಸ ಹಾಗೂ ಮೂಲಸೌಕರ್ಯ ಅಭಿವೃದ್ಧಿ ಕಾಮಗಾರಿ | 2022-23 | 150.00 | 0.00 | ಈ ಕಾಮಗಾರಿ ಅನುಷ್ಠಾನಗೊಳಿಸುವ ಬಗ್ಗೆ ಸರ್ಕಾರದ ಅನುಮೋದನೆಗಾಗಿ ಪ್ರಸ್ತಾವನೆ ಸಲ್ಲಿಸಿದ್ದು, ನಿರ್ದೇಶನ ಬಂದ ನಂತರ ಕಾಮಗಾರಿ ಪ್ರಾರಂಭಿಸ ಬೇಕಿದೆ |
| 18 | ವಿಜಯಪುರ ಜಿಲ್ಲೆಯ ದೇವರಹಿಪ್ಪರಗಿ ತಾಲ್ಲೂಕಿನ ಶ್ರೀ ಮಡಿವಾಳ ಮಾಚಿದೇವರ ಎಲ್ಲಾ ಕುರುಹುಗಳನ್ನು ಅಭಿವೃದ್ಧಿಗೊಳಿಸಿ ಸಾರ್ವಜನಿಕ ಯಾತ್ರಾ ಸ್ಥಳಗಳನ್ನಾಗಿಸುವ ಕಾಮಗಾರಿಗಳ ಕುರಿತು (2022-23ನೇ ಸಾಲಿನ ಆಯವ್ಯಯ ಘೋಷಣೆ) | 2022-23 | 100.00 | 33.00 | ಈ ಕಾಮಗಾರಿ ಅನುಷ್ಠಾನಗೊಳಿಸುವ ಬಗ್ಗೆ ಸರ್ಕಾರದ ಅನುಮೋದನೆಗಾಗಿ ಪ್ರಸ್ತಾವನೆ ಸಲ್ಲಿಸಿದ್ದು, ನಿರ್ದೇಶನ ಬಂದ ನಂತರ ಕಾಮಗಾರಿ ಪ್ರಾರಂಭಿಸ ಬೇಕಿದೆ |

(ರೂ. ಲಕ್ಷಗಳಲ್ಲಿ)

| ಕ್ರ. ಸಂ | ಯೋಜನೆಗಳ ವಿವರ | ಮಂಜೂರಾದ ವರ್ಷ | ಅಂದಾಜು ಮೊತ್ತ | ಈವರೆಗೂ ಬಿಡುಗಡೆ ಮಾಡಿರುವ ಅನುದಾನ | ಪ್ರಸ್ತುತ ಹಂತ |
|---|---|---|---|---|---|
| 19 | ವಿಜಯಪುರ ಜಿಲ್ಲೆ, ಬಸವನ ಬಾಗೇವಾಡಿಯಲ್ಲಿ ಅಗಸಿಯಿಂದ ಬಸವ ಸ್ಮಾರಕದವರೆಗೆ ಮತ್ತು ಸಂಗೊಳ್ಳಿ ರಾಯಣ್ಣಾ ವೃತ್ತದಿಂದ ಬಸವ ಸ್ಮಾರಕದವರೆಗೆ ಈ ಎರಡು ರಸ್ತೆಗಳನ್ನು ಅಭಿವೃದ್ಧಿಪಡಿಸುವ ಕಾಮಗಾರಿ | 2023-24 | 25.00 | 8.00 | ಅಂದಾಜು ಪಟ್ಟಿ ಸಿದ್ಧಪಡಿಸಲು ಕ್ರಮವಹಿಸಲಾಗಿದೆ. |
| 20 | ವಿಜಯಪುರ ಜಿಲ್ಲೆ ಸಿಂಧಗಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಗೋಲಗೇರಿ ಗ್ರಾಮದ ಶ್ರೀ ಗೋಲ್ಲಾಳೇಶ್ವರ ದೇವಸ್ಥಾನಕ್ಕೆ ಬರುವ ಪ್ರವಾಸಿಗರು / ಭಕ್ತಾದಿಗಳಿಗೆ ಮೂಲಭೂತ ಸೌಕರ್ಯ ಕಲ್ಪಿಸುವುದು. | 2023-24 | 50.00 | 35.00 | ಪ್ರಗತಿಯಲ್ಲಿದೆ |
| 21 | ವಿಜಯಪುರ ಜಿಲ್ಲೆ ಸಿಂಧಗಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಯಕಂಚಿ ಗ್ರಾಮದ ಶ್ರೀದೌಲಮಲ್ಲಿಕ ದೇವಸ್ಥಾನಕ್ಕೆ ಬರುವ ಪ್ರವಾಸಿಗರು / ಭಕ್ತಾದಿಗಳಿಗೆ ಮೂಲಭೂತ ಸೌಕರ್ಯ ಕಲ್ಪಿಸುವುದು. | 2023-24 | 50.00 | 35.00 | ಈ ಕಾಮಗಾರಿ ಅನುಷ್ಠಾನಗೊಳಿಸುವ ಬಗ್ಗೆ ಸರ್ಕಾರದ ಅನುಮೋದನೆಗಾಗಿ ಪ್ರಸ್ತಾವನೆ ಸಲ್ಲಿಸಿದ್ದು, ನಿರ್ದೇಶನ ಬಂದ ನಂತರ ಕಾಮಗಾರಿ ಪ್ರಾರಂಭಿಸ ಬೇಕಿದೆ |
| 22 | ಇಂಡಿ ತಾಲ್ಲೂಕು ಗಾಣಿಗ ಸಮುದಾನ ಭವನ ನಿರ್ಮಾಣ | 2023-24 | 100.00 | 35.00 | ಈ ಕಾಮಗಾರಿ ಅನುಷ್ಠಾನಗೊಳಿಸುವ ಬಗ್ಗೆ ಸರ್ಕಾರದ ಅನುಮೋದನೆಗಾಗಿ ಪ್ರಸ್ತಾವನೆ ಸಲ್ಲಿಸಿದ್ದು, ನಿರ್ದೇಶನ ಬಂದ ನಂತರ ಕಾಮಗಾರಿ ಪ್ರಾರಂಭಿಸ ಬೇಕಿದೆ |
| 23 | ಇಂಡಿ ತಾಲ್ಲೂಕು ಪಡನೂರ ಗ್ರಾಮದ ಶ್ರೀ ಭೀಮಾಶಂಕರ ದೇವಸ್ಥಾನಕ್ಕೆ ಮೂಲಸೌಕರ್ಯ ಒದಗಿಸುವುದು. | 2023-24 | 50.00 | 20.00 | ಈ ಕಾಮಗಾರಿ ಅನುಷ್ಠಾನಗೊಳಿಸುವ ಬಗ್ಗೆ ಸರ್ಕಾರದ ಅನುಮೋದನೆಗಾಗಿ ಪ್ರಸ್ತಾವನೆ ಸಲ್ಲಿಸಿದ್ದು, ನಿರ್ದೇಶನ ಬಂದ ನಂತರ ಕಾಮಗಾರಿ ಪ್ರಾರಂಭಿಸ ಬೇಕಿದೆ |
| 24 | ಇಂಡಿ ತಾಲ್ಲೂಕು ತಡವಲಗಾ ಗ್ರಾಮದ ಜೋಡುಗುಡಿ ಶ್ರೀ ಮಲ್ಲಿಕಾರ್ಜುನ ದೇವಸ್ಥಾನದ ಹತ್ತಿರ ಮೂಲಭೂತ ಸೌಕರ್ಯಗಳ ಒದಗಿಸುವುದು. | 2023-24 | 50.00 | 20.00 | ಈ ಕಾಮಗಾರಿ ಅನುಷ್ಠಾನಗೊಳಿಸುವ ಬಗ್ಗೆ ಸರ್ಕಾರದ ಅನುಮೋದನೆಗಾಗಿ ಪ್ರಸ್ತಾವನೆ ಸಲ್ಲಿಸಿದ್ದು, ನಿರ್ದೇಶನ ಬಂದ ನಂತರ ಕಾಮಗಾರಿ ಪ್ರಾರಂಭಿಸ ಬೇಕಿದೆ |

(ರೂ. ಲಕ್ಷಗಳಲ್ಲಿ)

| ಕ್ರ. ಸಂ | ಯೋಜನೆಗಳ ವಿವರ | ಮಂಜೂರಾದ ವರ್ಷ | ಅಂದಾಜು ಮೊತ್ತ | ಈವರೆಗೂ ಬಿಡುಗಡೆ ಮಾಡಿರುವ ಅನುದಾನ | ಪ್ರಸ್ತುತ ಹಂತ |
|---|---|---|---|---|---|
| 25 | ಇಂಡಿ ತಾಲ್ಲೂಕು ಹರೇಬೇವನೂರು ಗ್ರಾಮದ ಶ್ರೀ ಮಲ್ಲಿಕಾರ್ಜುನ ದೇವಸ್ಥಾನದ ಹತ್ತಿರ ಮೂಲಭೂತ ಸೌಕರ್ಯಗಳ ನಿರ್ಮಾಣ ಕಾಮಗಾರಿ | 2023-24 | 25.00 | 10.00 | ಈ ಕಾಮಗಾರಿ ಅನುಷ್ಠಾನಗೊಳಿಸುವ ಬಗ್ಗೆ ಸರ್ಕಾರದ ಅನುಮೋದನೆಗಾಗಿ ಪ್ರಸ್ತಾವನೆ ಸಲ್ಲಿಸಿದ್ದು, ನಿರ್ದೇಶನ ಬಂದ ನಂತರ ಕಾಮಗಾರಿ ಪ್ರಾರಂಭಿಸ ಬೇಕಿದೆ |
| 26 | ವಿಜಯಪುರ ಜಿಲ್ಲೆ ಬಸವನಬಾಗೇವಾಡಿಯ ಯಾತ್ರಿನಿವಾಸ ಮೇಲ್ಭಾಗದಲ್ಲಿ ಹೆಚ್ಚುವರಿ ಕೋಠಡಿಗಳ ನಿರ್ಮಾಣ ಕಾಮಗಾರಿ | 2023-24 | 75.00 | 0.00 | ಈ ಕಾಮಗಾರಿ ಅನುಷ್ಠಾನಗೊಳಿಸುವ ಬಗ್ಗೆ ಸರ್ಕಾರದ ಅನುಮೋದನೆಗಾಗಿ ಪ್ರಸ್ತಾವನೆ ಸಲ್ಲಿಸಿದ್ದು, ನಿರ್ದೇಶನ ಬಂದ ನಂತರ ಕಾಮಗಾರಿ ಪ್ರಾರಂಭಿಸ ಬೇಕಿದೆ |
| 27 | ಬಸವನಬಾಗೇವಾಡಿ ತಾಲ್ಲೂಕಿನ ಮುತ್ತಗಿ ಗ್ರಾಮದಲ್ಲಿ ಯಾತ್ರಿನಿವಾಸ ನಿರ್ಮಾಣ ಹಾಗೂ ಮೂಲಭೂತ ಸೌಲಭ್ಯ ಕಲ್ಪಿಸುವ ಕಾಮಗಾರಿ | 2023-24 | 70.00 | 0.00 | ಈ ಕಾಮಗಾರಿ ಅನುಷ್ಠಾನಗೊಳಿಸುವ ಬಗ್ಗೆ ಸರ್ಕಾರದ ಅನುಮೋದನೆಗಾಗಿ ಪ್ರಸ್ತಾವನೆ ಸಲ್ಲಿಸಿದ್ದು, ನಿರ್ದೇಶನ ಬಂದ ನಂತರ ಕಾಮಗಾರಿ ಪ್ರಾರಂಭಿಸ ಬೇಕಿದೆ |
| | ಒಟ್ಟು | | **4069.00** | **2949.00** | |